**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)**

**ಎಸ್.ಸಿ. ಸಂಖ್ಯೆ: 94 /2025**

**CW-9**
**PW-7**

| | |
|---|---|
| | **ಸಾಕ್ಷಿಯನ್ನು ದಿ:20.01.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ಮುನಿರಾಜು |
| **ತಂದೆಯ ಹೆಸರು** | ಮುನಿಯಪ್ಪ |
| **ವಯಸ್ಸು** | 48 ವರ್ಷ |
| **ಉದ್ಯೋಗ** | ಪೈಂಟರ್ |
| **ವಾಸಸ್ಥಳ** | ಮರಗಲ್ ಗ್ರಾಮ, ಬಂಗಾರಪೇಟೆ ತಾಲ್ಲೂಕು. |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕ ರವರಿಂದ:-**

ನನಗೆ ಚಾಸಾ-10 ರಿಂದ 13 ರವರ ಪರಿಚಯ ಇರುವುದಿಲ್ಲ. ನನಗೆ ಈಗ ತೋರಿಸುತ್ತಿರುವ ಶವತನಿಖಾ ವರದಿಯಲ್ಲಿರುವ ಸಹಿ ನನ್ನದು. ಸದರಿ ಶವಪಂಚನಾಮೆಯನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು. ಸುಮಾರು ಒಂದು ವರ್ಷದ ಹಿಂದೆ ಕೋಲಾರದ ಎಸ್ ಎನ್ ಆರ್ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದಾಗ ಪೊಲೀಸರು ಶವಗಾರದ ಬಳಿ ಪಂಚನಾಮೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಆದರೆ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಪೊಲೀಸರು ನಿಪಿ.4 ಪಂಚನಾಮೆಗೆ ನನ್ನಸಹಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ಪತ್ರೆಯ ಶವಗಾರದಲ್ಲಿ ಯಾವುದೇ ವ್ಯಕ್ತಿಯ ಶವವನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸರ್ಕಾರಿ ಅಭಿಯೋಕರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಲಾಗಿ ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕ ರವರಿಂದ:-**

ದಿ: 25-12-2024 ರಂದು ಮೃತ ತ್ರಿವೇಣಿ ಯ ಮೃತದೇಹವನ್ನು ಆಸ್ಪತ್ರೆಯ ಶವಗಾರದಲ್ಲಿ ಮರಣೋತ್ತರ ಪರೀಕ್ಷೆಗಾಗಿ ಇಟ್ಟಿದ್ದು ಆ ಸಮಯದಲ್ಲಿ ನಾನು ಸದರಿ ಮೃತದೇಹವನ್ನು ನೋಡಿ ಗುರುತಿಸಿದ್ದು ಈ ಬಗ್ಗೆ ಪೊಲೀಸರು ಮದ್ಯಾಹ್ನ 2-30 ರಿಂದ ಸಂಜೆ 5-00 ಗಂಟೆಯವರೆಗೆ ನಿಪಿ.4 ರಂತೆ ಶವಪಂಚನಾಮೆ ಮಾಡಿ ಅದರಲ್ಲಿನ ವಿಷಯಗಳನ್ನು ನನಗೆ ಓದಿ ತಿಳಿಸಿ ನಂತರ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದ್ದರೂ ಮತ್ತು ಘಟನೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಆರ್ ವಿ ವಕೀಲರಿಂದ:**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆ ಇಲ್ಲ**

**ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,
Sd/-

**(ಶಿವಕುಮಾರ.ಬಿ)**
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ ಕೆ.ಜಿ.ಎಫ್(ಪೀಠ)

**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ (ಕೆಜಿಎಫ್ ಪೀಠ)**

**ಎಸ್.ಸಿ. ಸಂಖ್ಯೆಃ 94/2025**

**CW-10**
**PW-8**

| | |
|---|---|
| | **ಸಾಕ್ಷಿಯನ್ನು ದಿಃ20.01.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.** |
| **ಸಾಕ್ಷಿಯ ಹೆಸರು** | ರಾಜಪ್ಪ |
| **ತಂದೆಯ ಹೆಸರು** | ಮುನಿಯಪ್ಪ |
| **ವಯಸ್ಸು** | 47 ವರ್ಷ |
| **ಉದ್ಯೋಗ** | ಗಾರೆ ಕೆಲಸ |
| **ವಾಸಸ್ಥಳ** | ಕಮ್ಮಸಂದ್ರ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರವರಿಂದಃ-**

ಚಾಸಾ-8, 9, 11 ರಿಂದ 13 ರವರು ಗೊತ್ತಿಲ್ಲ. ನನಗೆ ಈಗ ತೋರಿಸುತ್ತಿರುವ ಶವತನಿಖಾ ವರದಿಯಲ್ಲಿರುವ ಸಹಿ ನನ್ನದು. ಸದರಿ ಶವಪಂಚನಾಮೆಯನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.4(ಸಿ) ಎಂದು ಗುರುತಿಸಲಾಯಿತು. ಸುಮಾರು ಒಂದು ವರ್ಷದ ಹಿಂದೆ ನಮ್ಮ ಊರಿನ ನಿವಾಸಿಗಳಾದ ತ್ರಿವೇಣಿ ಮತ್ತು ಅವರ ಮಕ್ಕಳು ಮಕ್ಕಳು ಮೃತಪಟ್ಟಿದ್ದ ವಿಚಾರಕ್ಕೆ ಸಂಬಂಧಪಟ್ಟಂತೆ ಕೋಲಾರದ ಎಸ್ ಎನ್ ಅರ್ ಅಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಮೃತದೇಹಗಳನ್ನು ತೆಗೆದುಕೊಂಡು ಹೋಗಿದ್ದರು. ನಮ್ಮ ಊರಿನ ನಿವಾಸಿಗಳಾಗಿದ್ದರಿಂದ ನಾನು ಸಹ ಸದರಿ ಅಸ್ಪತ್ರೆ ಬಳಿ ಹೋದಾಗ ಪೊಲೀಸರು ಶವಗಾರದಲ್ಲಿ ಇರಿಸಿದ್ದ ತ್ರಿವೇಣಿ ಮೃತದೇಹವನ್ನು ತೋರಿಸಿದ್ದು ಆಕೆ ನಮ್ಮ ಸಂಬಂಧಿಕರಾಗಿದ್ದರಿಂದ ಮೃತದೇಹವನ್ನು ನೋಡಿ ಗುರುತಿಸಿದ್ದೇನೆ. ನಂತರ ಈ ಬಗ್ಗೆ ಪೊಲೀಸರು ನಿಪಿ.4 ರಂತೆ ಶವಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಶವಪಂಚನಾಮೆ ಕಾಲಕ್ಕೆ ಪೊಲೀಸರು ಶವಗಾರದ ಬಳಿ ಮೃತದೇಹದ ಬಗ್ಗೆ ಬಾವಚಿತ್ರಗಳನ್ನು ಸಹ ತೆಗೆದಿದ್ದಾರೆ. ಸದರಿ ಬಾವಚಿತ್ರಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.5 ಮತ್ತು 6 ಎಂದು ಗುರುತಿಸಲಾಗಿದೆ. ಸದರಿ ಬಾವಚಿತ್ರಗಳಲ್ಲಿ ಸಾಕ್ಷಿಯು ತನ್ನನ್ನು ನೋಡಿ ಗುರುತಿಸಿರುತ್ತಾರೆ. ಅ ಸಮಯದಲ್ಲಿ ಚಾಸಾ-13 ನಾರಾಯಣಪ್ಪ ಹಾಜರಿದ್ದು ಶವಪಂಚನಾಮೆಗೆ ಸಹಿ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಅರ್ ವಿ ವಕೀಲರಿಂದಃ-**

ನಿಪಿ.4 ಶವಪಂಚನಾಮೆಯಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ.

**ಮರುವಿಚಾರಣೆ ಇಲ್ಲ**

**ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,

Sd/-

**(ಶಿವಕುಮಾರ.ಬಿ)**

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ ಕೆ.ಜಿ.ಎಫ್(ಪೀಠ)